ದಿನಾಂಕ 22-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿಗಳ ಪರ ಶ್ರೀ ಜಿ.ಎಸ್.ಕೆ ವಕೀಲರಿಂದಃ</u>**

1. ಕೆ.ಸಿ.ಸಿ ಬ್ಯಾಂಕ್ ನ ಮುಖ್ಯ ಶಾಖೆ ಧಾರವಾಡದಲ್ಲಿ ಇದೆ ಎಂದರೆ ಸರಿ. ಸದರಿ ಮುಖ್ಯ ಶಾಖೆಗೆ ನಾನು ನಿರ್ದೇಶಕನಾಗಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿಯು ನನ್ನ ಅಜ್ಜಿ. 1 ನೇ ಪ್ರತಿವಾದಿಯು ಖಾಯಂ ಆಗಿ ಮೈಸೂರಿನಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಕಲ್ಲಾಪುರದಲ್ಲಿಯೇ ವಾಸವಿದ್ದು, ಆದರೆ ಮೈಸೂರಿಗೆ ಹೋಗಿ ಬಂದು ಮಾಡುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಇಬ್ಬರು ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ಇಬ್ಬರು ಗಂಡು ಮಕ್ಕಳ ಪೈಕಿ ಒಬ್ಬರು ಮೈಸೂರಿನಲ್ಲಿ ವೈದ್ಯರಿದ್ದಾರೆ ಎಂದರೆ ಸರಿ. ಸದರಿ ವೈದ್ಯರೊಂದಿಗೆ ಖಾಯಂ ಆಗಿ 1 ನೇ ಪ್ರತಿವಾದಿಯು ವಾಸವಿದ್ದಾರೆ ಎಂದರೆ ಸಾಕ್ಷಿಯು ಮೈಸೂರು ಮತ್ತು ಕಲ್ಲಾಪುರ ಎರಡೂ ಕಡೆಗೂ ಹೋಗಿ ಬಂದು ಮಾಡುತ್ತಾರೆ ಎಂದು ನುಡಿಯುತ್ತಾರೆ.

2. 1 ನೇ ಪ್ರತಿವಾದಿಯು ನನಗೆ ಬರೆದು ಕೊಟ್ಟಿರುವ ಒಟ್ಟು ಮುಕ್ತಿಯಾರ ಪತ್ರದಲ್ಲಿ ಆಕೆಯ ವಿಳಾಸವನ್ನು ಮೈಸೂರಿನ ಅಥವಾ ಕಲ್ಲಾಪುರಕ್ಕೆ ಸಂಬಂಧಿಸಿದ ವಿಳಾಸವನ್ನು ನೀಡಿರುತ್ತಾರೋ ಅಥವಾ ಇಲ್ಲವೋ ನನಗೆ ನೆನಪಿಲ್ಲ. ನಾನು ದ್ವಿತೀಯ ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಬರೆದುಕೊಟ್ಟ ನಿ.ಡಿ-26 ರ ಮೊಕ್ತಿಯಾರ ಪತ್ರದಲ್ಲಿ 1 ನೇ ಪ್ರತಿವಾದಿಯ ವಿಳಾಸ ಮೈಸೂರಿಗೆ ಸಂಬಂಧಿಸಿದ ವಿಳಾಸ ಆಗಿರುತ್ತದೆ ಎಂದರೆ ಸರಿ. ನನಗೆ ದಾವಾ ಆಸ್ತಿಯ ಬಗ್ಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಯ ಸಂಖ್ಯೆ 204. ಅದರ ಪೂ-ಪ ಮತ್ತು ಉ-ದ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಪೂ- ಹೊಂಡ, ಪ- ಕಾಲುವೆ, ಉ- ಪ್ರಕಾಶ ಶೆಟ್ಟಪ್ಪನವರ ಜಮೀನು, ದ- ದೇಸಾಯಿ ರವರಿಗೆ ಸೇರಿದ ಆಸ್ತಿಗಳು ಇವೆ. ದಾವಾ ಆಸ್ತಿಯ ಉತ್ತರಕ್ಕೆ ಚಕ್ಕಡಿ ಹೋಗುವಷ್ಟು ದಾರಿ ಇದೆ ಎಂದರೆ ಸಾಕ್ಷಿಯು ಕಾಲು ದಾರಿ ಇದ್ದು, ಆದರೆ ಚಕ್ಕಡಿ

ಹೋಗುವಷ್ಟು ಕಾಲ ದಾರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಉತ್ತರಕ್ಕೆ ಚಕ್ಕಡಿಯನ್ನು ತೆಗೆದುಕೊಂಡು ಹೋಗವಷ್ಟು ಕಾಲು ದಾರಿ ಇದ್ದರೂ ಸಹ ಬರಿ ಕಾಲು ದಾರಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಕಾಲುವೆ ಏರಿ ಇದೆ ಎಂದರೆ ಸರಿ. ಸದರಿ ಏರಿಯ ನಂತರ ಕಾಲುವೆ ಇದೆ ಎಂದರೆ ಸರಿ. ಕಲ್ಲಾಪುರ - ಮಲಗುಂದ ಡಾಂಬರೀನ ಮುಖ್ಯ ರಸ್ತೆಯಿಂದ ಪೂರ್ವ-ಪಶ್ಚಿಮವಾಗಿ ಹೋಗಲು ಉತ್ತರ - ದಕ್ಷಿಣ ಸುಮಾರು 8 ರಿಂದ 10 ಅಡಿಗಳ ಅಗಲವುಳ್ಳ ಒಂದು ಸಿ.ಡಿಯನ್ನು ನಿರ್ಮಿಸಲಾಗಿದೆ ಎಂದರೆ ಸಾಕ್ಷಿಯು ಸಿ.ಡಿ ಯನ್ನು ನಿರ್ಮಿಸಿದ್ದು, ಅದು 2-3 ಅಡಿಗಳ ಅಗಲದ ಸಿ.ಡಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮುಖ್ಯ ರಸ್ತೆಯಿಂದ ಪೂ-ಪ ವಾಗಿ ಮುಂದೆ ಹೋದಾಗ ಅಲ್ಲಿ ರಾಮಣ್ಣ ತರವಂದ, ಪಾಪಣ್ಣ ಮತ್ತು ದೇಸಾಯಿ ಮನೆತನದವರ ಮನೆಗಳು ಇವೆ ಎಂದರೆ ಸರಿ. ಸದರಿ ರಾಮಣ್ಣ ತರವಂದ, ಪಾಪಣ್ಣ ಮತ್ತು ದೇಸಾಯಿ ಮನೆತನದವರು ಎಲ್ಲಿಗಾದರೂ ಹೋದರೆ ಕಾಲುವೆಗೆ ಹತ್ತಿಕೊಂಡಂತೆ ಇರುವ ಏರಿ ಮತ್ತು ಸಿ.ಡಿಯ ಮೂಲಕ ಹೋಗುತ್ತಾರೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ**.** ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ**.**

Sd/-
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ**.**

ಸಾಕ್ಷಿದಾರರ ಸಹಿ